## ಕರ್ನಾಟಕ ಸರ್ಕಾರ

## ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಬೆಳಗಾವಿ ಜಿಲ್ಲೆ.

ಸಂ:ಬಿಸಿಡಬ್ಲ್ಯೂ/ಸಿಆರ್-158/2016-17

ದಿನಾಂಕ:07-07-2017

### ಅಧಿಸೂಚನೆ

ಸರ್ಕಾದ ಆದೇಶದ ಸಂಖ್ಯೆ:ಹಿಂವಕ336/ಬಿಇಟಿ/2015 ದಿನಾಂಕ:05-11-2015 ಹಾಗೂ ಸರ್ಕಾರದ ಆದೇಶ ಸಂಖ್ಯೆ:ಹಿಂವಕ/90/ಬಿಇಟಿ/2016 (ಭಾಗ-2) ದಿನಾಂಕ:29-09-2016 ರನ್ವಯ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ವಿದ್ಯಾರ್ಥಿನಿಲಯಗಳಲ್ಲಿ ಖಾಲಿ ಇರುವ ಅಡುಗೆಯವರ-80 ಹುದ್ದೆಗಳಿಗೆ ಅದರಂತೆ ಅಡುಗೆ ಸಹಾಯಕರ-92 ಹುದ್ದೆಗಳಿಗೆ ನೇರ ನೇಮಕಾತಿ ಮೂಲಕ ಭರ್ತಿ ಮಾಡಲು ಈ ಇಲಾಖೆಯ ಅಧಿಸೂಚನೆ ಸಂಖ್ಯೆ : ಬಿಸಿಡಬ್ಲ್ಯೂ/ಸಿಆರ್-158/2016-17 ದಿನಾಂಕ:19-10-2016 ರಡಿ ಅಧಿಸೂಚನೆ ಹೊರಡಿಸಲಾಗಿತ್ತು. ಅದರಂತೆ ತಾತ್ಕಾಲಿಕ ಆಯ್ಕೆ ಪಟ್ಟಿಯನ್ನು ಈ ಕೆಳಕಂಡಂತೆ ಪ್ರಕಟಿಸಲಾಗಿದೆ. ದೃಷ್ಟಿಮಾಂಧ್ಯ/ಅಂಗವಿಕಲರ ಮೀಸಲಾತಿಯಡಿ ತಾತ್ಕಾಲಿಕ ಪಟ್ಟಿಯಲ್ಲಿ ಆಯ್ಕೆಯಾದ ಅಭ್ಯರ್ಥಿಗಳ ವೈದ್ಯಕೀಯ ಪ್ರಮಾಣ ಪತ್ರಗಳ ಪರಿಶೀಲನೆಗಾಗಿ ಜಿಲ್ಲಾ ವೈದ್ಯಕೀಯ ಮಂಡಳಿ/ಸಮಿತಿಗೆ ಸಲ್ಲಿಸಲಾಗಿದ್ದು ಸದರಿ ಅಭ್ಯರ್ಥಿಗಳ ಜಿಲ್ಲಾ ವೈದ್ಯಕೀಯ ಮಂಡಳಿ/ಸಮಿತಿಯ ವೈದ್ಯಕೀಯ (ದೃಷ್ಟಿಮಾಂಧ್ಯರ ಪ್ರತಿಶತ/ಅಂಗವೈಕಲ್ಯತೆ ಪ್ರಮಾಣ ಪತ್ರ) ಪ್ರಮಾಣ ಪತ್ರದ ಅರ್ಹತೆಯನ್ವಯ ಅಂತಿಮ ಆಯ್ಕೆ ಪಟ್ಟಿಯಲ್ಲಿ ಪರಿಗಣಿಸಲಾಗುವುದು. ಅನರ್ಹಗೊಂಡ ಅಭ್ಯರ್ಥಿಗಳ ಆಯ್ಕೆಯನ್ನು ಪರಿಗಣಿಸಲಾಗುವುದಿಲ್ಲ

ಈ ತಾತ್ಕಾಲಿಕ ಆಯ್ಕೆ ಸಂಬಂಧಿಸಿದಂತೆ ಆಕ್ಷೇಪಣೆಗಳೇನಾದರೂ ಇದ್ದಲ್ಲಿ ಅಭ್ಯರ್ಥಿಗಳು ಈ ಕೆಳಕಂಡ ವಿಳಾಸಕ್ಕೆ ಲಿಖಿತ ಹೇಳಿಕೆ ಮೂಲಕ ಸೂಕ್ತ ದಾಖಲೆಗಳೊಂದಿಗೆ 21-07-2017ರ ಸಂಜೆ 5-30 ಗಂಟೆಯೊಳಗೆ ಆಕ್ಷೇಪಣೆಗಳನ್ನು ಸಲ್ಲಿಸಬಹುದಾಗಿರುತ್ತದೆ.

ವಿಳಾಸ: ಜಿಲ್ಲಾ ಅಧಿಕಾರಿಗಳು, ಹಿಂದುಳಿದ ವರ್ಗಗಳ ಕಲ್ಯಾಣ
ಇಲಾಖೆ, ಡಿ.ಸಿ ಆಫಿಸ್ ಕಂಪೌಂಡ್ ಬೆಳಗಾವಿ.

ನೇಮಕಾತಿ ಪ್ರಾಧಿಕಾರ- ಜಿಲ್ಲಾ ಅಧಿಕಾರಿಗಳು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಬೆಳಗಾವಿ.

ಜಿಲ್ಲಾ ಅಧಿಕಾರಿಗಳು ಹಿಂದುಳಿದ ವರ್ಗಗಳ
ಕಲ್ಯಾಣ ಇಲಾಖೆ, ಬೆಳಗಾವಿ ಹಾಗೂ ಸದಸ್ಯ
ಕಾರ್ಯದರ್ಶಿಗಳು, ಹಿಂದುಳಿದ ವರ್ಗಗಳ
ಕಲ್ಯಾಣ ಇಲಾಖೆ ಜಿಲ್ಲಾ ಮಟ್ಟದ ಗ್ರೂಪ್-ಡಿ
ನೌಕರರನೇಮಕಾತಿ ಪ್ರಾಧಿಕಾರ, ಬೆಳಗಾವಿ.

D:\MY DOC\Group D Direct appointment\Notification.doc